

ಮುಂಬಯಿ



ಶಿವನಹಳ್ಳಿ

ಸುದ್ದಿ ಸಂಚಯ



ಡೆಹ್ರಾಡೂನ್

# ರಾಮಕೃಷ್ಣ ಮಹಾಸಂಘದ ಪರಿಹಾರ ಕಾರ್ಯಗಳು

**೧. ಕೋವಿಡ್ ೧೯ ಪರಿಹಾರಕಾರ್ಯ : ಭಾರತದಲ್ಲಿ : ಮುಂಬೈ** ರಾಮಕೃಷ್ಣ ಮಿಷನ್ ಏಪ್ರಿಲ್ ೧೪ರಿಂದ ಮೇ ೪ರ ವರೆಗೆ ಸಮರ್ಪಿತ ಕೋವಿಡ್ ಆರೋಗ್ಯ ಕೇಂದ್ರ (DCHC) ವನ್ನು ಸ್ಥಾಪಿಸಿದ್ದು, ೫೧ ಮಂದಿ ರೋಗಿಗಳಿಗೆ ಚಿಕಿತ್ಸೆ ನೀಡಿತು. ಈ ಕೇಂದ್ರದಲ್ಲಿ ಲಸಿಕೆ ನೀಡುವ ಕಾರ್ಯವನ್ನು ಕೂಡ ಆರಂಭಿಸಲಾಯಿತು. **ಡೆಹ್ರಡೂನ್** ರಾಮಕೃಷ್ಣ ಮಿಷನ್ ವಿವೇಕಾನಂದ ನೇತ್ರಾಲಯವನ್ನು ಕೋವಿಡ್ ಆಸ್ಪತ್ರೆಯಾಗಿ ಪರಿವರ್ತಿಸಿದೆ. ಇಲ್ಲಿ ಮಾರ್ಚ್ ತಿಂಗಳಿನಿಂದ ಲಸಿಕೆ ಹಾಕುವ ಸವಲತ್ತು ಕೂಡ ಒದಗಿಸಲಾಗಿದೆ. **ಲಕ್ನೋ** ರಾಮಕೃಷ್ಣ ಮಿಷನ್ ಪ್ರತಿದಿನ ೩೦೦ ಸಿಲಿಂಡರ್ ಆಮ್ಲಜನಕವನ್ನು ಉತ್ಪಾದಿಸುವ ಘಟಕವನ್ನು ಆರಂಭಿಸಿದೆ; ಕೋವಿಡ್ ರೋಗಿಗಳ ಚಿಕಿತ್ಸೆಗಾಗಿ ೯೩ ಹಾಸಿಗೆಗಳ ವಾರ್ಡನ್ನು ಆರಂಭಿಸಿದೆ. ಹರಿದ್ವಾರದ **ಕಂಖಲ್**ನಲ್ಲಿರುವ ರಾಮಕೃಷ್ಣ ಮಿಷನ್ ಸೇವಾಶ್ರಮವು ಏಪ್ರಿಲ್ ೨೩ರಂದು ೧೫೦ ಹಾಸಿಗೆಗಳಿರುವ ಸಮರ್ಪಿತ ಕೋವಿಡ್ ಆರೋಗ್ಯ ಕೇಂದ್ರವನ್ನು (DCHC - LEVEL 2) ಆರಂಭಿಸಿದೆ. ಈ ಕೇಂದ್ರವು ಮೇ ೪ರ ವರೆಗೆ ೧೦೫೦ ಮಂದಿ ಕೋವಿಡ್ ರೋಗಿಗಳಿಗೆ ಚಿಕಿತ್ಸೆ ನೀಡಿದೆ. **ಶಿವನಹಳ್ಳಿ** ರಾಮಕೃಷ್ಣ ಮಿಷನ್, ದಿನಗೂಲಿಯ ಕಾರ್ಮಿಕರಿಗೆ ೨ ತಿಂಗಳಿಗೆ ಸಾಕಾಗುವಷ್ಟು ಆಹಾರ ಪದಾರ್ಥ ಗಳಿರುವ ೮೦ ಕಿಟ್‌ಗಳನ್ನು ವಿತರಿಸಿದೆ. **ದೆಹಲಿ** ಕೇಂದ್ರವು ಅಂತರ್ಜಾಲ ತರಗತಿಗಳಿಗೆ ಅನುಕೂಲವಾಗುವಂತೆ ಜವಾಹರ್ ನವೋದಯ ವಿದ್ಯಾಲಯಗಳಿಗೆ ೧೨೫ LED ಪ್ರಾಜೆಕ್ಟರ್‌ಗಳನ್ನು ವಿತರಿಸಿದೆ. ಪಶ್ಚಿಮ ಬಂಗಾಳದ **ರಾಯಗಂಜ್** ಕೇಂದ್ರವು ಸಮೀಪದ ಸಾರ್ವಜನಿಕ ಸ್ಥಳಗಳನ್ನು ಸಾನಿಟೈಜರ್‌ನಿಂದ ಶುದ್ಧೀಕರಿಸಿತು. ಕೊಲ್ಕತ್ತದ **ಸಿಂಥಿ** (ಬೇನಿ ಪಾಲ್ ಉದ್ಯಾನ) ಕೇಂದ್ರವು ಮಾರ್ಚ್ ೩೧ರ ವರೆಗೆ ೧೨ ಕುಟುಂಬಗಳಿಗೆ ದಿನಸಿ ಪದಾರ್ಥಗಳನ್ನು ವಿತರಿಸಿತು.

**ವಿದೇಶಗಳಲ್ಲಿ :** ಬಾಂಗ್ಲಾದೇಶದ **ಬಾಘೇರ್‌ಹಾಟ್** ಕೇಂದ್ರವು ಏಪ್ರಿಲ್ ೨೦ರಂದು ೫೦ ಕುಟುಂಬಗಳಿಗೆ ದಿನಸಿ ಪದಾರ್ಥಗಳನ್ನು ವಿತರಿಸಿತು. ದಕ್ಷಿಣ ಆಫ್ರಿಕಾದ **ಡರ್ಬನ್** ಕೇಂದ್ರವು ತನ್ನ ಉಪ-ಕೇಂದ್ರಗಳೊಂದಿಗೆ ಏಪ್ರಿಲ್ ತಿಂಗಳಲ್ಲಿ ೧೧೭ ಕುಟುಂಬಗಳಿಗೆ ವಿವಿಧ ದಿನಸಿ ಪದಾರ್ಥಗಳನ್ನು ವಿತರಿಸಿತು; **ಫೀನಿಕ್ಸ್** ಕೇಂದ್ರವು ಏಪ್ರಿಲ್ ತಿಂಗಳಲ್ಲಿ ವಿವಿಧ ಆಹಾರ ಹಾಗೂ ದಿನಸಿ ಪದಾರ್ಥಗಳನ್ನು ವಿತರಿಸಿತು.

**೨. ಅಗ್ನಿ ಅಫಘಾತ ಪರಿಹಾರ ಕಾರ್ಯ :** ೧) ಅರುಣಾಚಲ ಪ್ರದೇಶದ ತಿರಪ್ ಜಿಲ್ಲೆಯ ಲೊಂಗ್‌ಲಿಯಾಂಗ್ ಗ್ರಾಮದಲ್ಲಿ ಮಾರ್ಚ್ ೧೮ರಂದು ನಡೆದ ಅಗ್ನಿ ಅಫಘಾತದಲ್ಲಿ ೧೧೫ ಮನೆಗಳು ಸುಟ್ಟುಹೋಗಿದ್ದು, **ನರೋತ್ತಮ ನಗರ** ಕೇಂದ್ರವು ಈ ಕುಟುಂಬಗಳಿಗೆ ವಿವಿಧ ದಿನಸಿ ಪದಾರ್ಥ ಹಾಗೂ ಇನ್ನಿತರ ಸಾಮಗ್ರಿಗಳನ್ನು ವಿತರಿಸಿತು. ೨) ಅಸ್ಸಾಂ ರಾಜ್ಯದ ಕರೀಂಗಂಜ್ ಜಿಲ್ಲೆಯ ಕಾಯಸ್ಥಗ್ರಾಮದಲ್ಲಿ ನಡೆದ ಬೆಂಕಿ ಆಕಸ್ಮಿಕದಲ್ಲಿ ಹಾನಿಗೊಳಗಾದ ಕುಟುಂಬಗಳಿಗೆ **ಕರೀಂಗಂಜ್** ಕೇಂದ್ರವು ದಿನಸಿ ಪದಾರ್ಥಗಳನ್ನು ವಿತರಿಸಿತು. ೩) ತಮಿಳು ನಾಡಿನ ನಾಗಪಟ್ಟಣಂ ನಲ್ಲಿ ನಡೆದ ಅಗ್ನಿ ಅಫಘಾತದಲ್ಲಿ ೪೦ ಮನೆಗಳು ಸುಟ್ಟುಹೋಗಿದ್ದು, ಆ ಕುಟುಂಬಗಳಿಗೆ ಚೆನ್ನೈ ಮಠದ ಉಪಕೇಂದ್ರವಾದ **ತಂಜಾವೂರು** ಮಠವು ವಸ್ತ್ರಾದಿಗಳನ್ನು ವಿತರಿಸಿತು.

ಅಗ್ನಿ ಅಫಘಾತ ಪುನರ್ವಸತಿ: ಒಡಿಶಾದ ಭದ್ರಕ್ ಜಿಲ್ಲೆಯ ತಿಹಾಡಿ ಗ್ರಾಮದಲ್ಲಿ ನಡೆದ ಅಗ್ನಿ ದುರಂತದಲ್ಲಿ ಹಾನಿಗೊಳಗಾದ ಕುಟುಂಬಕ್ಕೆ ನೆರವಾಗುವಂತೆ **ಭುವನೇಶ್ವರ** ಕೇಂದ್ರವು ಏಪ್ರಿಲ್ ೮ರಂದು ಒಂದು ಪಂಪ್ ಸೆಟ್ಟನ್ನು ಸ್ಥಾಪಿಸಿತು.

**೩. ಸಂತ್ರಸ್ತ ಪರಿಹಾರ :** (ಭಾರತದಲ್ಲಿ) **ಭುವನೇಶ್ವರ, ಇಚ್ಚಾಪುರ, ಜಲಪ್ಯಾಗುಡಿ, ಕೈಲಾಸಶಹರ, ಕಾನ್ಪುರ, ನರೇಂದ್ರಪುರ, ಪುರಿ ಮಿಷನ್, ವಾರಾಣಸಿ ಅದ್ವೈತ ಆಶ್ರಮ,** (ವಿದೇಶದಲ್ಲಿ) ಝಾಂಬಿಯಾದ **ಲುಸಾಕ** ಕೇಂದ್ರಗಳು ಹಲವು ಸಂತ್ರಸ್ತ ಪರಿಹಾರ ಕಾರ್ಯಗಳನ್ನು ನಡೆಸಿವೆ.

**೪. ಪುನರ್ನಿರ್ಮಾಣ :** ೧) **ಕೇರಳ : 1) ಕೊಯಲಾಂಡಿ** ಕೇಂದ್ರವು ಏಪ್ರಿಲ್ ತಿಂಗಳಲ್ಲಿ ಕೋಝಿಕೋಡ್ ಜಿಲ್ಲೆಯ ಅರಿಕ್ಕುಳಂ ನಲ್ಲಿ ಬಡ ಕುಟುಂಬವೊಂದಕ್ಕೆ ಮನೆಯನ್ನು ನವೀಕರಿಸಿ ಕೊಟ್ಟಿದೆ. 2) **ಕೋಝಿಕ್ಕೋಡ್** ಕೇಂದ್ರವು ಜಿಲ್ಲೆಯ ಪುದುಕ್ಕೋಡ್ ನಲ್ಲಿ ಬಡ ವ್ಯಕ್ತಿಗೆ ಮನೆಯ ಹೆಂಚನ್ನು ನವೀಕರಿಸಿ ಕೊಟ್ಟಿದೆ. ೨) **ರಾಜಸ್ಥಾನ : ಖೇತ್ರಿ** ಕೇಂದ್ರವು ಏಪ್ರಿಲ್ 3ರಂದು ಖೇತ್ರಿಯ ಸರ್ಕಾರಿ ಶಾಲೆಯೊಂದಕ್ಕೆ ಶೌಚಾಲಯ ಬ್ಲಾಕನ್ನು ನಿರ್ಮಿಸಿಕೊಟ್ಟಿದೆ.



ಕಂಖಲ್ ಸೇವಾಶ್ರಮ



ಖೇತ್ರಿ ರಾಮಕೃಷ್ಣ ಮಿಷನ್



ಲಕ್ನೋ ರಾಮಕೃಷ್ಣ ಮಿಷನ್

Managing Editor : Swami Muktidananda
Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020